# “ಶ್ರೀ ವಿದ್ಯಾಮಾನ್ಯರು ಮತ್ತು ಏಕಾದಶಿ”

ಅಂದು ವಿಕ್ರಮ ಸಂವತ್ಸರ ಚೈತ್ರ ಕೃಷ್ಣ ದಶಮಿ ಶ್ರೀಪಾದರ ದೇಹಸ್ಥಿತಿ ಪೂರ್ಣಹದಗೆಟ್ಟಿತ್ತು. ಆ ಅನಾರೋಗ್ಯದ ಪ್ರಭಾವದಿಂದ ಅವರಿಗೆ ಏನೂ ರುಚಿಸುತ್ತಿರಲಿಲ್ಲ. ಅವರು ಏನನ್ನೂ ತಿನ್ನುತ್ತಿರಲಿಲ್ಲ. ಆದರೆ ಅಂದು ದಶಮಿಯಾದ್ದರಿಂದ ಸ್ವಲ್ಪವಾದರೂ ಊಟವನ್ನು ಮಾಡಬೇಕಿತ್ತು. ಆದರೂ ಮಾಡಲಿಲ್ಲ, ಪೇಜಾವರ ಶ್ರೀಪಾದರ ಒತ್ತಾಯ, ಎಲ್ಲ ಶಿಷ್ಯರ, ವೈದ್ಯರ ಒತ್ತಾಯದಿಂದ ಅಂದು ರಾತ್ರಿ ಒಂದು ಚಿಕ್ಕ ಇಡ್ಲಿಯ ತುಂಡನ್ನು ತಿಂದರು. ಸ್ವಲ್ಪ ಹಣ್ಣು, ಸ್ವಲ್ಪ ಹಾಲು ಕುಡಿದರು. ಎಲ್ಲರಿಗೂ ಸಮಾಧಾನವಾಯಿತು. ಆದರೆ ಅಂದು ರಾತ್ರಿಯ ಸರದಿಯಲ್ಲಿ ಶ್ರೀ ಕೊರ್ಲಹಳ್ಳಿ ವೇಂಕಟಾಚಾರ್ ಹಾಗೂ ಶ್ರೀ ವೆಂಕಟರಮಣಾಚಾರ್ಯರು ಎಚ್ಚರದಲ್ಲಿದ್ದು ಶ್ರೀಪಾದರನ್ನು ನೋಡುತ್ತಿದ್ದರು. ಸುಮಾರು ರಾತ್ರಿ 12.30ರ ವೇಳೆಯಲ್ಲಿ ಶ್ರೀಪಾದರಿಗೆ ತಡೆಯಲಾರದಷ್ಟು ವೇಗದಲ್ಲಿ ವಾಂತಿಯಾಯಿತು. ಅವರು ಅಂದು ತಿಂದಿದ್ದೆಲ್ಲಾ ವಾಂತಿಯಾಯಿತು. ನಂತರ ಶಿಷ್ಯರು “ಸ್ವಲ್ಪ ಎಳನೀರನ್ನು ನೀಡಲೇ” ಎಂದಾಗ, ಶ್ರೀಗಳು “ಹೂಂ” ಎಂದರು. ಮಡಿಯಲ್ಲೇ ಶ್ರೀಪಾದರಿಗೆ ಕುಡಿಸಲು ತೊಡಗಿದಾಗ ಅಲ್ಲಿಯತನಕ ಸುಮ್ಮನಿದ್ದ ಶ್ರೀಗಳು “ಇವತ್ತು ಯಾವ ತಿಥಿ” ಎಂದರು. ನಿಜ ನುಡಿದರೆ ಶ್ರೀಗಳು ಸ್ವೀಕರಿಸುವುದಿಲ್ಲವೆಂದು ಭಾವಿಸಿ “ದಶಮಿ” ಎಂದರು ವೆಂಕಟೇಶಾಚಾರ್ಯರು. ಆದರೆ ಆಗಲೇ ಏಕಾದಶೀ ತಿಥಿ ಪ್ರವೇಶವಾಗಿತ್ತು. ಸ್ವಾಮಿಗಳು ಮತ್ತೆ ಮತ್ತೆ ಎರಡುಮೂರು ಬಾರಿ ಕೇಳಿದರು. ಆಗಲೂ ಅದೇ ಉತ್ತರ ನೀಡಿದರು. ಎಳನೀರನ್ನು ಒತ್ತಾಯವಾಗಿ ಕುಡಿಸಿದರೂ ಅದು ಗಂಟಲೊಳಗೆ ಹೋಗಲಿಲ್ಲ, ಹೊರಗೆ ಬಂತು. ಅವರು ಉಗುಳಿದರು, ಅದು ವೆಂಕಟರಮಣಾಚಾರ್ಯರಿಗೂ, ಗಿರೀಶನಿಗೂ, ವೆಂಕಟೇಶಾಚಾರ್ಯರಿಗೂ ಬಿದ್ದಿತು. ಮರುದಿನ ಏಕಾದಶಿ. ಡಾಕ್ಟರ್ ಕೇಶವರವರಿಗೆ ವಾಂತಿಯ ವಿಷಯವನ್ನು ತಿಳಿಸಿದರು. ಅವರು ಒಂದು ಮಾತ್ರೆಯನ್ನು ಪುಡಿಮಾಡಿ ಜೇನು ತುಪ್ಪದಲ್ಲಿ ಕಲಿಸಿ ಶ್ರೀಗಳಿಗೆ ನೀಡಲು ಉದ್ಯುಕ್ತರಾದರು. ಆಗಲೂ ಇವತ್ತು ಏನು ತಿಥಿ ಎಂದರು. ಆಗ ಬಲವಂತಮಾಡಿ ಬಾಯಲ್ಲಿ ಮಾತ್ರೆ ಹಾಕಿದರು. ಅದು ಒಳಗೆ ಹೋದರೂ, ಒಳಗೆ ಇಳಿಯಲಿಲ್ಲ, ಮತ್ತೆ ವಾಂತಿ ಮಾಡಿದರು. ಶ್ರೀಗಳವರಿಗೆ ಏಕಾದಶಿಯ ಅರಿವಾಗಿತ್ತು, ಆದ್ದರಿಂದಲೇ ಅವರು ನುಂಗಲಿಲ್ಲ. ಅದರ ಮುಂದಿನ ಏಕಾದಶಿಯಂದು 14.5.2000 ವೈಶಾಖ ಶುದ್ದ ಏಕಾದಶಿಯಂದು ಪೂರ್ಣ ಉಪವಾಸದಿಂದಿದ್ದು ಶ್ರೀ ಹರಿಯ ಪದವನ್ನು ಸೇರಿದರು. ಒಟ್ಟು 87 ವರ್ಷಗಳ ಕಾಲ ಎಲ್ಲ ಏಕಾದಶಿಗಳನ್ನು ಉಪವಾಸದಿಂದಲೇ ನಡೆಸಿದ್ದರು. ಒಂದೇ ಒಂದು ಏಕಾದಶಿಗೂ ಭಗ್ನಗೊಳಿಸಲಿಲ್ಲ.

ಶ್ರೀಪಾದರು ಸಕಲ ಮಾಧ್ವರೂ ಒಂದೇ ಏಕಾದಶಿಯನ್ನು ಆಚರಿಸಬೇಕು ಎಂದು ಎಲ್ಲ ಮತಗಳ ಯತಿಗಳನ್ನು, ವಿದ್ವಾಂಸರನ್ನೂ, ಕರೆಸಿ ಒಂದೇ ನಿಶ್ಚಿತ ಗಣಿತ ಅವಶ್ಯಕ, ಆರ್ಯ, ಧ್ರುಕ್, ಮೊದಲಾದ ಸಿದ್ಧಾಂತಗಳ ಗ್ರಂಥಗಳನ್ನು, ದೇಶದ ವಿವಿಧ ಗ್ರಂಥಗಳನ್ನೂ ತರಿಸಿ, ಪ್ರಯತ್ನಿಸಿದರೂ, ಅದರಲ್ಲಿ ಯಶಸ್ವಿಯಾಗಲಿಲ್ಲ.

**ಶ್ರೀರಂಗನ ಸನ್ನಿಧಿಯಲ್ಲಿ ಸಹಸ್ರ ಚಂದ್ರದರ್ಶನ ಶಾಂತಿಯನ್ನು ೧೯೯೪ರ ಅಕ್ಟೋಬರ್ ೧೩, ೧೪ರಂದು ಮಾಡಲಾಯಿತು.**





**ಸಂಗ್ರಹ – ನರಹರಿ ಸುಮಧ್ವ** **ಮೂಲ – ಕೊರ್ಲಹಳ್ಳಿ ವೇಂಕಟೇಶಾಚಾರ್ಯ**